ವಿಷಯ: ಊ) ಭಾರ ಎತ್ತುವ ಸ್ಪರ್ಧೆಯನ್ನು ಮೈಸೂರು ದಸರಾ ಕ್ರೀಡಾ ಕೂಟದಲ್ಲಿ ಸೇರಿಸುವ ಬಗ್ಗೆ.

ಶ್ರೀ ಡಿ.ಪಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೆ, ಕ್ರೀಡಾ ಕ್ಷೇತ್ರದಲ್ಲಿ ಭಾರತದ ಹೆಸರು ಯಾವುದಾದರೂ ಪಟ್ಟಿಯಲ್ಲಿ ದಾಖಲಾಗಿದ್ದರೆ ಅದು ಭಾರ ಎತ್ತುವ ಸ್ಪರ್ಧೆ. ಈ ಭಾರ ಎತ್ತುವ ಸ್ಪರ್ಧೆಯಲ್ಲಿ ಶ್ರೀಮತಿ ಮಲ್ಲೇಶ್ವರಿಯವರು ಒಂದು ಕಂಚಿನ ಪದಕವನ್ನು ಪಡೆದುಕೊಂಡು ಭಾರತದ ಹೆಸರನ್ನು ಆ ಪದಕದ ಪಟ್ಟಿಯಲ್ಲಿ ಸೇರುವಂತೆ ಮಾಡಿದ್ದಾರೆ. ಆದರೆ ದುರ್ದೈವ ಇವತ್ತು ಈ ಭಾರ ಎತ್ತುವ ಸ್ಪರ್ಧೆ ಒಷ್ಯನ್ ಕ್ರೀಡಾ ಕೂಟದಿಂದ ಹೊರಬಹುದು, ಬಹುಶಃ ಭಾರತಕ್ಕೆ ಅತ್ಯಂತ ಹೆಚ್ಚಿನ ಪದಕವನ್ನು ತಂದುಕೊಟ್ಟಿದೆ. ಆದರೆ ಇದಕ್ಕೆ ಸಾಕಷ್ಟು ಮಾನ್ಯತೆ ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿ ಸಿಗುತ್ತಿಲ್ಲ. ಈಗ ದಸರಾ ಕ್ರೀಡಾ ಕೂಟಗಳು ನಡೆಯುತ್ತವೆ, ಅದರಲ್ಲಿ ಎಲ್ಲಾ ಕ್ರೀಡೆಗಳಿಗೂ ವ್ಯವಸ್ಥೆಗಳಿವೆ, ಆದರೆ ಈ ಭಾರತಕ್ಕೆ ಪದಕವನ್ನು ತಂದುಕೊಟ್ಟಂತಹ ಭಾರ ಎತ್ತುವ ಸ್ಪರ್ಧೆಯನ್ನು ಇನ್ನೂ ಕೂಡ ಅದರಲ್ಲಿ ಅಳವಡಿಸಿಕೊಂಡಿಲ್ಲ. ಈ ಸದನದ ಮುಖಾಂತರ ನಾನು ಒತ್ತಾಯ ಮಾಡುತ್ತಾ ಇದ್ದೇನೆ. ಮಾನ್ಯ ಕ್ರೀಡಾ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ದಯವಿಟ್ಟು ಮುಂದಿನ ದಸರಾ ಕ್ರೀಡಾಕೂಟಗಳಲ್ಲಿ ಭಾರ ಎತ್ತುವ ಸ್ಪರ್ಧೆಯನ್ನು ಸೇರಿಸಿಕೊಳ್ಳಬೇಕು, ಇದರಿಂದ ಭಾರತಕ್ಕೆ ಕೀರ್ತಿ ತಂದುಕೊಟ್ಟಂತಹ ಆ ಶ್ರೀಮತಿ ಮಲ್ಲೇಶ್ವರಿಯವರಿಗೆ ಗೌರವ ತರುವಂತಹ ಕೆಲಸಗಳಾಗುತ್ತವೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಯುವ ಜನ ಹಾಗೂ ಕ್ರೀಡಾ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಿನ್ನೆ ತಾನೇ ಈ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ಹೇಳಿದ್ದಾರೆ. ಆದಷ್ಟು ಬೇಗ ವರದಿಯನ್ನು ತರಿಸಿಕೊಂಡು ನಾಳೆ ಪರಿಶೀಲನೆ ಮಾಡುತ್ತೇನೆ.